# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 579 |
| ಸದಸ್ಯರ ಹೆಸರು | : ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 16.09.2021 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಉತ್ತರ ಕರ್ನಾಟಕದ ಬಹು ನಿರೀಕ್ಷಿತ ಮಹದಾಯಿ ಯೋಜನೆಯನ್ನು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕೈಗೆತ್ತಿಕೊಂಡು ವಿಳಂಬ ಮಾಡದೇ ಯೋಜನೆಯನ್ನು ಪೂರ್ಣಗೊಳಿಸಿ ಈ ಭಾಗದ ಜನರಿಗೆ ನೀರೊದಗಿಸುವ ವಿಚಾರ ಸರ್ಕಾರದ ಮುಂದಿದೆಯೇ: | ಹೌದು. |
| ಆ. | ಹಾಗಿದ್ದಲ್ಲಿ, ಮಹದಾಯಿ ಯೋಜನೆಯನ್ನು ಪೂರ್ಣಗೊಳಿಸಿ ಜನರ ಆಶಯ ಪೂರೈಸಲು ಸರ್ಕಾರ ತೆಗೆದುಕೊಂಡು ಕ್ರಮಗಳೇನು (ವಿವರ ನೀಡುವುದು) | ದಿನಾಂಕ:27/02/2020 ರಂದು ಕೇಂದ್ರ ಸರ್ಕಾರವು ಗ್ಯಾಜೆಟ್ ಪ್ರಕಟಣೆ ಮಾಡಿರುವ ಮಹದಾಯಿ ಜಲ ವಿವಾದ ನ್ಯಾಯಾಧೀಕರಣದ ದಿನಾಂಕ:14/08/2018ರ ಅಂತಿಮ ತೀರ್ಪಿನನ್ವಯ ಕಳಸಾ ನಾಲಾ ತಿರುವು ಯೋಜನೆಗೆ 1.72 ಟಿ.ಎಂ.ಸಿ. ಹಾಗೂ ಬಂಡೂರ ನಾಲಾ ತಿರುವು ಯೋಜನೆಗೆ 2.18 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಲಾಗಿರುತ್ತದೆ.<br><br>ನ್ಯಾಯಾಧಿಕರಣದ ಹಂಚಿಕೆಗೆ ಅನುಗುಣವಾಗಿ ಕಳಸಾ ನಾಲಾ ತಿರುವು ಯೋಜನೆಗೆ ರೂ.885.80 ಕೋಟಿಗಳ ಹಾಗೂ ಬಂಡೂರ ನಾಲಾ ಯೋಜನೆಯ ರೂ. 791.50 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಗಳಿಗೆ ಸರ್ಕಾರದ ದಿನಾಂಕ: 10.07.2020 ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ.<br><br>ಸದರಿ ಯೋಜನೆಗಳ ಪೂರ್ವ ಕಾರ್ಯ ಸಾಧ್ಯತಾ ವರದಿ (PFR) ಯನ್ನು ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಕಳಸ ನಾಲಾ-ಬಂಡೂರ ನಾಲಾ ತಿರುವು ಯೋಜನೆಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯವಿರುವ ಎಲ್ಲಾ ತಿರುವಳಿಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ. |
| ಇ. | ಮಹದಾಯಿ ವಿವಾದದ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಾಂತರ ತೀರ್ಪಿನ ವಿವರವೇನು ಎಷ್ಟೆಷ್ಟು ಪ್ರಮಾಣದ ನೀರು ಹಂಚಿಕೆಯಾಗಿದೆ; (ವಿವರ ಒದಗಿಸುವುದು) | ಮಹದಾಯಿ ನ್ಯಾಯಾಧೀಕರಣವು ಮಹದಾಯಿ ನದಿಯ ಒಟ್ಟು ಇಳುವರಿಯನ್ನು 75 % ಅವಲಂಬನೆ ಮೇಲೆ 188.06 ಟಿ.ಎಂ.ಸಿ. ಎಂದು ಅಂದಾಜಿಸಿದೆ. ಸದರಿ ಪ್ರಮಾಣದಲ್ಲಿ ಕಣಿವೆ ರಾಜ್ಯಗಳಿಗೆ ಮಾಡಿರುವ ನೀರಿನ ಹಂಚಿಕೆಯ ವಿವರಗಳು ಕೆಳಗಿನಂತಿವೆ:<br>1. ಗೋವಾ : 24.00 ಟಿ.ಎಂ.ಸಿ (ಹಾಲಿ ಬಳಕೆಯಾಗುತ್ತಿರುವ 9.395 ಟಿ.ಎಂ.ಸಿ.ಗೆ ಹೆಚ್ಚುವರಿಯಾಗಿ)<br>2. ಕರ್ನಾಟಕ : 13.42 ಟಿ.ಎಂ.ಸಿ<br>3. ಮಹಾರಾಷ್ಟ್ರ : 1.33 ಟಿ.ಎಂ.ಸಿ |

<table>
<tr><td></td><td></td><td>
ರಾಜ್ಯಕ್ಕೆ ಹಂಚಿಕೆಯಾಗಿರುವ 13.42 ಟಿ.ಎಂ.ಸಿ.ಯ ವಿವರಗಳು ಕೆಳಗಿನಂತಿವೆ:
<table>
<tr><td>1.</td><td>ಕಳಸಾ ನಾಲಾ ತಿರುವು ಯೋಜನೆ</td><td>1.72</td></tr>
<tr><td>2</td><td>ಬಂಡೂರಾ ನಾಲಾ ತಿರುವು ಯೋಜನೆ</td><td>2.18</td></tr>
<tr><td>3.</td><td>ಮಹದಾಯಿ ಜಲ ವಿದ್ಯುತ್ ಯೋಜನೆ</td><td>8.02</td></tr>
<tr><td>4.</td><td>ಮಹದಾಯಿ ಕಣಿವೆಯೊಳಗಿನ ಪ್ರದೇಶಗಳ ನೀರಾವರಿ, ಕುಡಿಯುವ ನೀರಿನ ಬಳಕೆ ಮತ್ತು ಇತರೆ ಸೌಲಭ್ಯಗಳಿಗಾಗಿ</td><td>1.50</td></tr>
</table>
</td></tr>
<tr><td>ಈ.</td><td>ಮಹದಾಯಿ ಯೋಜನೆಯನ್ನು ಪೂರ್ಣಗೊಳಿಸುವುದರಿಂದ ಎಷ್ಟು ನಗರಗಳಿಗೆ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲಾಗುವುದು ಅವುಗಳು ಯಾವುವು ಇತರೆ ಏನೆಲ್ಲಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.</td><td>ಕಳಸಾ-ಬಂಡೂರ ನಾಲಾ ತಿರುವು ಯೋಜನೆಗಳಿಂದ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳು ಮತ್ತು ಮಾರ್ಗದಲ್ಲಿ ಬರುವ ಕುಂದಗೋಳ ಪಟ್ಟಣ ಹಾಗೂ ಗ್ರಾಮಗಳು ಹಾಗೂ ಕುಡಿಯುವ ನೀರು ಒದಗಿಸಲು ಯೋಜಿಸಲಾಗಿರುತ್ತದೆ.</td></tr>
<tr><td>ಉ.</td><td>ಮಹದಾಯಿ ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು; ಇದಕ್ಕಾಗಿ ಎಷ್ಟು ಅನುದಾನ ಒದಗಿಸಲಾಗಿದೆ; ಒದಗಿಸಿದ ಅನುದಾನದಲ್ಲಿ ಏನೆಲ್ಲಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)</td><td>ಕಳಸಾ ನಾಲಾ ತಿರುವು ಯೋಜನೆಗೆ ರೂ.885.80 ಕೋಟಿಗಳ ಹಾಗೂ ಬಂಡೂರ ನಾಲಾ ಯೋಜನೆಯ ರೂ. 791.50 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಗಳಿಗೆ ಸರ್ಕಾರದ ದಿನಾಂಕ: 10.07.2020 ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ<br>2021-22ನೇ ಸಾಲಿನಲ್ಲಿ ಕಳಸಾ ನಾಲಾ ಹಾಗೂ ಬಂಡೂರ ನಾಲಾ ತಿರುವು ಯೋಜನೆಗಳಿಗಾಗಿ ಒಟ್ಟು ರೂ. 141.30 ಕೋಟಿಗಳ ಅನುದಾನದ ಅವಕಾಶವನ್ನು ಕಲ್ಪಿಸಲಾಗಿದೆ.<br>ಕಳಸಾ ನಾಲಾ ಯೋಜನೆಯ ಕೂಡು ಕಾಲುವೆ ಕಾಮಗಾರಿಯು ಬಹುತೇಕವಾಗಿ ಪೂರ್ಣಗೊಂಡಿದ್ದು ಇದಕ್ಕಾಗಿ ರೂ.244.89 ಕೋಟಿಗಳ ವೆಚ್ಚ ಮಾಡಲಾಗಿದೆ.</td></tr>
<tr><td>ಊ.</td><td>ಮಹದಾಯಿ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು.</td><td>ಕಳಸ ನಾಲಾ-ಬಂಡೂರ ನಾಲಾ ತಿರುವು ಯೋಜನೆಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯವಿರುವ ಎಲ್ಲಾ ತಿರುವಳಿಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.</td></tr>
</table>

ಸಂಖ್ಯೆ:ಜಸಂಇ 203 ಕೆಬಿಎನ್ 2021

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು